
**ನಕಲಿ ಪಡಿತರ ಚೀಟಿ ಮಾಹಿತಿ ಕೊಟ್ಟವರಿಗೆ ಬಹುಮಾನ**



ಸರ್ಕಾರ ಕೊಡೋ ಬಹುಮಾನಕ್ಕಿಂತ ಹೆಚ್ಚಿಗೆ ಕೊಡ್ತೀನಿ. ನನ್ನದು ನಕಲಿ ಕಾರ್ಡ್ ಅಂತ ಹೇಳ್ಬೇಡ!




ಹುಡುಗ ಕೇರಳದಲ್ಲಿ ಕೆಲಸದಲ್ಲಿದ್ದಾನೆ. ನೀವು ಧೈರ್ಯವಾಗಿ ಹುಡುಗಿ ಕೊಡಬಹುದು!







ಸರ್ಕಾರ ಖಾಲಿ ಹುದ್ದೆ ಭರ್ತಿ ಮಾಡೋದು ಅನುಮಾನ ಕಣ್ರೀ.. ಖಾಲಿ ಇರೋ ಮಂತ್ರಿಸ್ಥಾನವನ್ನೇ ಭರ್ತಿ ಮಾಡ್ತಿಲ್ಲ!




ಅತ್ತೆಗೆ ಒಂದು ಕಾಲ, ಕತ್ತೆಗೊಂದು ಕಾಲ ಅಂದಹಾಗೆ ನಿನ್ನ ಕತ್ತೆಗೂ ಕಾಲಬಂತು ಕಣಪ್ಪಾ..!

**ಹದಗೆಟ್ಟ ರಸ್ತೆ; ಜೀಪ್‌ನಲ್ಲೇ ಹೆರಿಗೆ!**




ಗಾಡಿಯಲ್ಲಿ ಒಂದು ರೌಂಡ್ ಸಿಟಿಯೆಲ್ಲಾ ಸುತ್ತಾಡಿಸಿಕೊಂಡು ಬನ್ನಿ.. ಸಹಜ ಹೆರಿಗೆಗೆ ಸಹಾಯ ಆಗುತ್ತೆ!

ರೈಲು ಚಲಿಸಿದಾಗ ಒಬ್ಬ ಒಂದು ಬೋಗಿ ಏರಿದ.

'ಸಾರ್, ಇದು ಲೇಡೀಸ್ ಕಂಪಾರ್ಟ್‌ಮೆಂಟ್, ನೀವು ಬೋರ್ಡ್ ನೋಡಲಿಲ್ವ?' ಟಿ.ಟಿ. ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡ.

'ಸಾರಿ ಸಾರ್, ನಾನು ನಿಮ್ಮನ್ನು ಗಂಡಸು ಅಂತ ತಿಳಿದು ಹತ್ತಿದೆ!' ಎಂದು ಅವನು ಟಿ.ಟಿ.ಯನ್ನು ಆಪಾದಮಸ್ತಕ ನೋಡಿದ.

★★★

'ಅಪ್ಪಾ, ಯುದ್ಧಗಳು ಹೇಗೆ ಪ್ರಾರಂಭವಾಗುತ್ತವೆ?'

'ಅಮೆರಿಕಾ ಮತ್ತು ಇಂಗ್ಲೆಂಡ್‌ಗಳಿಗೆ ಯಾವುದೋ ಮಾತಿಗೆ ವೈಮನಸ್ಸಾಯಿತು ಅಂತಿಟ್ಟುಕೋ...'

ಅಮ್ಮ ಬಾಯಿ ಹಾಕಿ ಗಂಡನಿಗೆ ಹೇಳಿದಳು:

'ನೋಡಿ, ಅಮೆರಿಕಾ ಮತ್ತು ಇಂಗ್ಲೆಂಡ್ ನಡುವೆ ಹೀಗಾಗಲು ಸಾಧ್ಯವೇ ಇಲ್ಲ.'

'ನಾನು ಉದಾಹರಣೆಗೆ ಹೇಳ್ತಿದ್ದೀನಿ, ಅಷ್ಟೆ.'

'ಆದರೆ ನೀವು ತಪ್ಪು-ತಪ್ಪು ಉದಾಹರಣೆ ಕೊಟ್ಟು ಮಕ್ಕಳ ದಾರಿ ತಪ್ಪಿಸುತ್ತಿದ್ದೀರಿ. ಇದು ಸರಿಯಲ್ಲ.'

'ನಾನು ದಾರಿ ತಪ್ಪಿಸುತ್ತಿಲ್ಲ.'

'ಹೌದು, ನೀವು ದಾರಿ ತಪ್ಪಿಸುತ್ತಿದ್ದೀರಿ.'

'ಬಾಯಿ ಮುಚ್ಚು!' ಗಂಡ ಗದರಿದ.



'ನಾನೇಕೆ ಬಾಯಿ ಮುಚ್ಚಲಿ? ಇದು ನನ್ನ ಮಕ್ಕಳ ಭವಿಷ್ಯದ ಪ್ರಶ್ನೆ!' ಹೆಂಡತಿಯೂ ಸೆರಗನ್ನು ಸೊಂಟಕ್ಕೆ ಬಿಗಿದುಕೊಂಡಳು.

ಮಗ ಮಧ್ಯ ಪ್ರವೇಶಿಸಿ ಸಮಾಧಾನ ಹೇಳಿದ:

'ಸರಿ, ನೀವೀಗ ಜಗಳ ಆಡಬೇಡಿ. ನನಗೆ ಯುದ್ಧಗಳು ಹೇಗೆ ಪ್ರಾರಂಭವಾಗುತ್ತವೆ ಎಂಬುದು ತಿಳಿಯಿತು.'

★★★

'ಡಾಕ್ಟರ್, ನಿಜ ಹೇಳಿ. ನಾನು ಗುಣವಾಗುವ ಸಾಧ್ಯತೆ ಎಷ್ಟಿದೆ?' ರೋಗಿ ಪ್ರಶ್ನಿಸಿದ.

'ಶೇ 100ರಷ್ಟು! ಈ ಕಾಯಿಲೆಯಲ್ಲಿ ಹತ್ತು ಜನ ರೋಗಿಗಳಲ್ಲಿ ಒಂಭತ್ತು ಜನ ರೋಗಿಗಳು ಸಾಯ್ತಾರೆ ಅಂತ ಅಂಕಿ ಅಂಶಗಳು ಹೇಳುತ್ತವೆ. ನನ್ನ ಹತ್ತು ಜನ ರೋಗಿಗಳಲ್ಲಿ ಈಗಾಗಲೇ ಒಂಬತ್ತು ಮಂದಿ ಸತ್ತಿದ್ದಾರೆ. ನೀನೀಗ ಹತ್ತನೆಯವನು!' ವೈದ್ಯರು ಇಂಜೆಕ್ಷನ್ ಚುಚ್ಚಲು ರೆಡಿಯಾದರು.

(ಸಂಗ್ರಹ) **ಡಿ.ಎನ್. ಶ್ರೀನಾಥ್**